





ಪರಿಚಯಿಸಿದ್ದು ಗಮನಾರ್ಹ.

ನಿಜ; ಮಲೆನಾಡು ಮೇಳ ಅನ್ನೋದು ಅವರ ಪಾಲಿಗೆ ಸಂತಸದ ಕ್ಷಣ. ಅದರ ಮುಂದೆ ಯಾವ ಶ್ರಮ, ಕಷ್ಟವೂ ಲೆಕ್ಕಕ್ಕಿಲ್ಲ. ಇಂಥ ಅವ್ಯಕ್ತಭಾವದ ಸಂತಸ, ಸಂಭ್ರಮ ಮತ್ತಿಘಟ್ಟದದಂಥ ದೂರದ ಕುಗ್ರಾಮದಿಂದ ಬರುವ ಲಕ್ಷ್ಮಿ ಸಿದ್ದಿ ಮತ್ತವರ ಸಂಗಡಿಗರದ್ದು ಮಾತ್ರವಾಗಿರಲ್ಲ. ಮೇಳದಲ್ಲಿ ಭಾಗಿಯಾದ ಎಲ್ಲರದೂ ಆಗಿರುತ್ತದೆ. ಎಲ್ಲ ವರ್ಗದವರು ಸಮಾನ ಮನಸ್ಕರಾಗಿ ಪಾಲ್ಗೊಳ್ಳುವುದು ಈ ಮೇಳದ ವಿಶೇಷ.

ಈ ಸಲದ ಮೇಳದಲ್ಲಿ 20 ಕಿ.ಮೀ. ದೂರದ ಶಿರಸಿ ತಾಲ್ಲೂಕಿನ ಶಿರಗೋಡಿನ ಸುವರ್ಣಾ ಹೆಗಡೆ 80 ಜಾತಿಯ ಡೇರೆ ಗಿಡ, ಗೆಡ್ಡೆಗಳನ್ನು ಮಾರಾಟಕ್ಕೆ ತಂದಿದ್ದರು. ಅವರು ಏಳು ವರ್ಷದಿಂದ ಈ ಮೇಳದಲ್ಲಿ ತಮ್ಮನೆ ಅಂಗಳದ ಡೇರೆ ಗಿಡ, ಗಡ್ಡೆಗಳನ್ನು ಮಾರಾಟ ಮಾಡಿಕೊಂಡು ಬಂದಿದ್ದಾರೆ. ಬರಿ ಗಿಡ, ಗೆಡ್ಡೆಗಳ ಸಹಿತ ಗಿಡ, ಪ್ಲಾಸ್ಟಿಕ್ ಬ್ಯಾಗಿನಲ್ಲಿ ನೆಟ್ಟ ಗಿಡ ಹೀಗೆ ಒಂದೊಂದಕ್ಕೂ ಒಂದು ದರ ನಿಗದಿಪಡಿಸಿದ್ದಾರೆ. ಮೇಳಕ್ಕಾಗಿ ಅವರು ಸಿದ್ಧತೆಯನ್ನು ಮೊದಲೇ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಒಂದಷ್ಟು ಆದಾಯವೂ ಸುವರ್ಣಾ ಅವರ ಪಾಲಾಗಲಿದೆ.

ಹೂತನ್‌ಜಾನ್ಮನೆಯ ಎನ್.ಕೆ. ಭಾನುಮತಿ ಮತ್ತಿಅವರೆ, ಕತ್ತಿ ಅವರೆ, ಬೆಂಡೆ, ಡಬ್ಬಲ್ ಅವರೆ, ಹಾಗಲ, ಬದನೆ, ಕಿಷ್ನಿ ಅವರೆ, ಮೆಣಸು, ಬಿಳಿ ಹರಿವೆ, ಗೊಂಡೆ (ಚೆಂಡು ಹೂ), ಮುಳ್ಳು ಸೌತೆ ಇಷ್ಟೇ ಅಲ್ಲ, 25ಕ್ಕೂ ಹೆಚ್ಚಿ ಜಾತಿಯ ತರಕಾರಿ ಬೀಜಗಳ ಸಂಗ್ರಹವನ್ನೇ ಹೊತ್ತು ತಂದಿದ್ದರು.

ಸ್ಥಳೀಯ ಗುಂಪುಗಳಲ್ಲದೇ ಯಲ್ಲಾಪುರದಿಂದ ಟೀಡ್ ಸ್ವಯಂಸೇವಾ ಸಂಸ್ಥೆ ಕೂಡ ವಿವಿಧ ಬಗೆಯ ಗಡ್ಡೆ ಗೆಣಸುಗಳನ್ನು ಪ್ರದರ್ಶನ, ಮಾರಾಟಕ್ಕೆ ತಂದಿಟ್ಟದ್ದರು. ಹೊನ್ನಾವರ ತಾಲ್ಲೂಕಿನ ಸ್ನೇಹಕುಂಜ ಕೂಡ ಮೇಳದಲ್ಲಿ ಭಾಗವಹಿಸಿತ್ತು. ಶಿರಸಿ ತಾಲ್ಲೂಕಿನ ಸೋಂದಾ, ಉಂಬಳಮನೆ, ಸಂತೆಮನೆ, ಬೆಳ್ಳಮನೆ, ಸಣ್ಣಕೇರಿ, ಗೋಳಿಕೊಪ್ಪ ಹಳ್ಳಿಗಳಲ್ಲಿ ಬೆಳೆದ ತರಕಾರಿ, ಹೂ ಗಿಡಗಳು, ಬಗೆಬಗೆಯ ತಿನಿಸುಗಳನ್ನು ಅಲ್ಲಿನ ಮಹಿಳಾ ಗುಂಪುಗಳು ಮೇಳಕ್ಕೆ ತಂದಿದ್ದವು.

ಗಮನ ಸೆಳೆದ ಕಳಲೆ ಖಾದ್ಯ ವೈವಿಧ್ಯ: ಈ ವರ್ಷದ ಮೇಳದಲ್ಲಿ ಆಯೋಜಿಸಿದ್ದ ಕಳಲೆ ಖಾದ್ಯ ಸ್ಪರ್ಧೆಯಲ್ಲಿ ಬರ್ಫಿ, ಲಾಡು, ಇಡ್ಲಿ, ಪಲ್ಯ, ಚಿತ್ರಾನ್ನ, ಶಂಕರಪೋಳಿ ಮುಂತಾದ 30ಕ್ಕೂ ಹೆಚ್ಚು ತಿನಿಸುಗಳು ನೋಡುಗರ ಬಾಯಲ್ಲಿ ನೀರೂರಿಸಿದವು.

## ವನಸ್ತ್ರೀ ಬೀಜ ಮೇಳಕ್ಕೆ 15ರ ಸಂಭ್ರಮ

2000ರಲ್ಲಿ ಸುನೀತಾ ರಾವ್ ಹುಟ್ಟು ಹಾಕಿದ ವನಸ್ತ್ರೀ ಸಂಸ್ಥೆಗೆ ಈಗ 15ರ ಹರೆಯ. ಮುಂಗಾರು ಆರಂಭವಾಗತ್ತಿದ್ದಂತೆ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಬೀಜ ಮೇಳ, ಶಿರಸಿ ತಾಲ್ಲೂಕಿನ ಹಳ್ಳಿ ಮಹಿಳೆಯರು ಮನೆಯಲ್ಲೇ ಸಂರಕ್ಷಿಸಿ ಇಟ್ಟುಕೊಳ್ಳುತ್ತಿದ್ದ ತರಕಾರಿ, ಹೂವಿನ ಬೀಜಗಳನ್ನು ವಿನಿಮಯ ಮಾಡಿಕೊಳ್ಳುವ ವೇದಿಕೆಯಾಗಿತ್ತು. ಈಗ ವ್ಯಾಪ್ತಿ ಜಿಲ್ಲೆಗೂ ಹರಡಿಕೊಂಡಿದೆ. ಬೀಜಗಳಿಗಷ್ಟೇ ಸೀಮಿತವಾಗಿದ್ದ ಮೇಳ, ಮಲೆನಾಡು ಮೇಳ ಎಂಬ ಹೆಸರಿನೊಂದಿಗೆ ವಿಸ್ತಾರಗೊಂಡಿದೆ. ಪ್ರತಿವರ್ಷ ನಡೆಯುವ ಮಲೆನಾಡು ಮೇಳದಲ್ಲಿ 15ಕ್ಕೂ ಹೆಚ್ಚು ಬೀಜಗುಂಪುಗಳ ಸದಸ್ಯೆಯರು ಪಾಲ್ಗೊಳ್ಳುತ್ತಾರೆ.

ನಾಟಿ ತರಕಾರಿ, ಹೂವಿನ ಬೀಜ, ಗಿಡ, ಗಡ್ಡೆಯಲ್ಲದೇ ಮನೆಯಲ್ಲೇ ಸಿದ್ಧಪಡಿಸುವ ಹಲಸಿನ ಹಪ್ಪಳ, ಚಿಪ್ಸ್, ಮೆಣಸಿನ ಸಂಡಿಗೆ, ಔಷಧ ಸಸ್ಯಗಳು, ಕೋಕಂ, ನೆಲ್ಲಿಜಾಮ್, ಉಪ್ಪಿನಕಾಯಿ, ಜೇನುತುಪ್ಪ, ಕರಕುಶಲ ವಸ್ತು ಮೊದಲಾದ ಗೃಹ ಉತ್ಪನ್ನಗಳ ಮಾರಾಟ ನಡೆಯುತ್ತವೆ. ಇದು ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲತೆ ಸಾರುತ್ತಿದೆ.